ಹೇಳಿದರೂ ಕೇಳದ ಆ ಹುಡುಗ ಗೊಂತಲ್ಲಿದ್ದ ದನ ಕರ ಅಟ್ಕಂಡು ತ್ವಾಟದ್ ಕಡಿಕೆ ಹೊರಟೇ ಬಿಡ್ತಂತೆ. ಈ ಗೌಡ್ರು ಏರ್ ದನೀಲೆ ಕೂಗಿದ್ರೆ, ಆ ಹುಡುಗ ಅಳುತ್ತ ಗೌಡ್ರತ್ತ ಬಂದೋನು, 'ನಾನೋಗಲ್ಲ, ಅಲ್ಲಿಗೆ ಮಾತ್ರ ನಾನೋಗಲ್ಲ' ಅಂತ ಅಳಲಿಕ್ಕೇ ಶುರುಮಾಡ್ಬಿಟ್ನಂತೆ. ಆ ಹುಡುಗನ್ನ ನೋಡಿ ಈ ತಾಯಿ ಅಂಗಲಾಚಿ ಕೈ ಚಾಚಿದ್ರೆ ಮತ್ತೆ ಈ ಹುಡುಗ 'ನಾನೋಗಲ್ಲ' ಅಂತ ಗೌಡರ ಪಕ್ಕಕ್ಕೆ ಬಂದು ನಿಲ್ತಂತೆ.

ಗೌಡ್ರ ಮನಸಿಗೆ ಒಂದು ವಿಚಾರ ಬಂತಂತೆ. ನಾನು ಧ್ವನಿ ಎತ್ತರಿಸಿ ಹೇಳಿದ್ರೆ ಈ ಹುಡುಗ ಹೋಗಲ್ಲ, ಅಂಗೇ ಉಪಾಯ ಮಾಡಿ ತಲೆ ಸವರಿ ಹೇಳಿದ್ರೆ ಮಾತ್ ಕೇಳುತ್ತೆ ಅಂದ್ಕಂಡು 'ಯಾಕೋ, ಹೋಗೋ... ಇವ್ರು ನಿನ್ನ ತಂದೆ ತಾಯಿ ಅಲ್ಲವೇನಪ್ಪಾ?' ಅಂದರೂ ಆ ಹುಡುಗ ಮತ್ತೆ 'ನಾನೆಂದೂ ಅಲ್ಲಿಗೆ ಹೋಗಲ್ಲ. ನಮ್ಮಟ್ಟೀಲಿ ನಮ್ಮವ್ವ ಒಲೇನೆ ಹಚ್ಚಲ್ಲ, ಹೊಟ್ಟೆಗೆ ಊಟಾನೂ ಕೊಡಲ್ಲ' ಅಂದೋನು, ಎತ್ತು ಕರುಗಳ ಹಿಡ್ಕಂಡು ಅತ್ತ ತೋಟುದ್ಕಡಿಕೆ ಹೋಗೇಬಿಟ್ನಂತೆ. ಬಾಯಿ ಬಾರದ ಹಸುಗಳ ಹಿಂದೆ ನಡೆದು ಹೋದ ಹುಡುಗನತ್ತ ನೋಡುತ್ತಾ, ನೋಡುತ್ತಾ ಗೌಡರು ತಾವೇ ಬಾಯಿ ಬಾರದಂತಾದರು. ತಂದೆ ತಾಯಿಗಳಿಗೆ ಏನನ್ನೂ ಹೇಳಲು ಅವರಿಗೆ ಸಾಧ್ಯವಾಗಲಿಲ್ಲ. ಮಗನಿಗೆ ಅನ್ನ ಹಾಕಲೂ ಸಾಧ್ಯವಾಗದ್ದನ್ನ ನೆನೆನೆನೆದು ದುಃಖಿತರಾದ ಆ ಹುಡುಗನ ತಂದೆ ತಾಯಿ ಕಣ್ಣೀರಿಡುತ್ತಲೇ 'ಇಲ್ಲಾರ ಬದುಕಿದಿಯಲ್ಲಾ ಸಾಕು' ಎಂದು ಸಮಾಧಾನಪಡುತ್ತಾ, ನಮ್ಮಟ್ಟೀಲಿ ಊಟ ಇಲ್ಲ ಅಂದ ಮಾತು ಮಾರ್ದನಿಸಿ, ಮಗನ ಇಂಥ ಸ್ಥಿತಿಗೆ ತಮ್ಮ ಬಡತನ ಕಾರಣವಾದುದಕ್ಕೆ ಜರಿದುಕೊಳ್ಳುತ್ತ ಊರಿನತ್ತ ಭಾರವಾದ ಹೆಜ್ಜೆ ಹಾಕುತ್ತ ಬರಲೊಲ್ಲದ ಕಾಲುಗಳನ್ನು ಎಳೆದುಕೊಂಡು ಹೋಗುತ್ತಿದ್ದರೆ, ಅದನ್ನು ನೋಡಿದ ಗೌಡರು ಮೌನಕ್ಕೆ ಜಾರಿದರು.

'ಈ ಸಿದ್ನುಡ್ಗ ಅಂಗೇನಾರ...' ಅನ್ನುತ್ತ ಶಂಕರಶೆಟ್ಟಿ ಅಚ್ಚರಿಪಟ್ಟನು. ಆ ಮಾತಿನಿಂದ ದ್ಯಾವಕ್ಕ ತಾನು ಮಾಡುತ್ತಿದ್ದ ಕೂಲಿ, ಸರಿಯಾಗಿ ಮಗೂಗೆ ಹೊತ್ತೊತ್ತಿಗೆ ಊಟ ಹಾಕಲು ಸಾಧ್ಯವಾಗದಿದ್ದದ್ದು ನೆನಪಾಗಿ ಕಣ್ಣೀರಿಟ್ಟಳು. ಹೆತ್ತಕರುಳು ಯಂಗಾದ್ರೂ ಸರಿ, ಎಲ್ಲಾದರೂ ಸುಖವಾಗಿದ್ರೆ ಸಾಕು ಎನ್ನುತ್ತ ಮಗುವಿಗೆ ಅನ್ನ ಹಾಕಲಾಗದ ಸ್ಥಿತಿ ತನ್ನನ್ನು ಆವರಿಸಿಕೊಂಡು, ಏಕಾಏಕಿ ಅಸಹನೀಯ ತಲೆಶೂಲೆ ಕಾಣಿಸಿಕೊಂಡಂತಾಗಿ ಎದ್ದು ಹೊರನಡೆದಳು.

ಅವಳ ಸಂಕ್ಟ ನೋಡಿದ ಗವಿರಂಗಣ್ಣ ಈ ಸನ್ನಿವೇಶದಲ್ಲಿ ಶಂಕರಶೆಟ್ಟಿ ಬರಬಾರದಿತ್ತು ಅನ್ನಿಸದೇ ಇರಲಿಲ್ಲ. 'ಇರಮ್ಮ ಇರು... ಯಾವುದಕ್ಕೂ ದುಡುಕಬೇಡ ಇನ್ನೆರಡು ದಿನ ಕಾಯಾಣ' – ಅವಳ ಜೊತೆ ವರಾಂಡದವರೆಗೆ ಬಂದ ಗವಿರಂಗಣ್ಣ 'ಈ ಬಡವರ ಗೋಳ ಯಾರು ಕೇಳ್ತಾರೆ. ಅಂಥಾ ಕಾಲ ಇದು' ಅಂತಲೂ ಅಂದ. ಗವಿರಂಗಣ್ಣ ಯಾವುದ್ಯಾವುದೋ ಕಾಗದ ಪತ್ರ ತಡಕಲು ಅತ್ತ ಹೋದರು.

ಗವಿರಂಗಣ್ಣನ ಮನೆಯಲ್ಲಿ ನಡೆದ ಸನ್ನಿವೇಶ ಶಂಕರಶೆಟ್ಟಿಯನ್ನು ಗಾಸಿಗೊಳಿಸಿದ್ದರಿಂದ ಕ್ಷಣಹೊತ್ತು ಮೌನ ಆವರಿಸಿತು. ಈ ಮೌನದ ನಡುವೆ ಅಲ್ಲೇ ದೇವರ ಹೊಲದ ದಿಕ್ಕಿನಿಂದ ಸೀಳಿಬಂದ ಅದೇನೋ ಗಲಾಟೆ ಶಬ್ದ, ಮೌನವನ್ನು ಮುರಿದಿತ್ತು. ಶಂಕರಶೆಟ್ಟಿಯು ಗವಿರಂಗಣ್ಣನ ಮನೆಯ ಹತ್ತಿರವೇ ನಿಂತಿದ್ದವನು ಆ ಗಲಾಟೆ ಕಿವಿಗೆ ಬೀಳುತ್ತಿದ್ದಂತೆ ಹೊರಗೆ ಬಂದು ನೋಡಿದನು. ಕಾಗದ ಪತ್ರ ಹುಡುಕುತ್ತಿದ್ದ ಗವಿರಂಗಣ್ಣ, 'ಲೋ ಶೆಟ್ಟಿ... ನನ್ನಿಂದ ನಿಂಗೇನಾದ್ರೂ ಕೆಲ್ಸ ಆಗ್ಬೇಕೇನೋ' ಅಂದನು. 'ಏನೂ ಇಲ್ಲ' ಅಂದು ಬೀದಿ ಕಡೆಗೆ ಬಂದನು.

ಅಗೋ ಆ ದಿಕ್ಕಿನಲ್ಲಿ ಮಲ್ಲನ ಗಾಡಿ ಹಾಗೂ ಚೊಟ್ನಿಂಗ ಕಾಣಿಸಿಕೊಂಡಿದ್ದರಿಂದ ಶಂಕರಶೆಟ್ಟಿಗೆ ಅಚ್ಚರಿಯಾಯಿತು. 'ಅಯ್ಯೋ' ಅಂದ ಶಂಕರಶೆಟ್ಟಿ ಈ ಚೊಟ್ಟನಿಂಗ ಬೆಳಿಗ್ಗೆ ತಾನೇ ಹೇಳಿದ್ದ. ಅದೇನಾದರೂ ಕ್ಯಾತೆ ತೆಗೆದ್ನ ಅನ್ನಿಸಿ ನಾಲ್ಕೆಜ್ಜೆ ಮುಂದೆ ಹೋದ. ಅತ್ತಿಂದ ಗಾಡಿಯಲ್ಲಿ ದನಗಳಿಗೆ ಮೇವು ತುಂಬಿಕೊಂಡು ಬರುತ್ತಿದ್ದ ಮಲ್ಲನ ಗಾಡಿ ತಡೆದು ನಿಲ್ಲಿಸಿದ ಚೊಟ್ನಿಂಗನು, 'ಏನೋ ಮಲ್ಲಣ್ಣ, ಹಂದಿ ತಪ್ಪಿಸ್ಕಂಡಿದ್ಕೆ ಊರಲ್ಲಿ ಅಂಗೇಳ್ತಿದ್ದಂತೆ, ಯಾಕೆ ನಿಮ್ಮವರು ಹೇಲಲ್ವ. ಬರಿ ನಾವು ಮಾತ್ರ ಹೇಲ್ತೀವ' ಎಂದು ಕೇಳಿದ.

'ಯಾಕೋ, ಎಲ್ಲರೂ ಹೇಲ್ತಾರೆ... ತಿಂದಿದ್ದೆಲ್ಲೋಗ್ಬೇಕು. ಆದ್ರೆ ನಿಮ್ಮ ತರ ಹಾದೀಲಿ ಬೀದೀಲಿ, ಥೂ?' ಎಂದು ಉಗಿದು ಮೂಗು ಮುಚ್ಚಿದ.

'ನೀವು ತಂಪಾದ್ದ ತಿಂತೀರ... ಮಜ್ಗೆ, ಮೊಸ್ರು, ತುಪ್ಪ... ಅದುಕ್ಕೆ ನಿಮ್ದು ತಡ್ದು ಬರುತ್ತೆ. ನೀವು ದೂರ ಹೋಗ್ತಿರ, ನಾವು ಹೇಳಿ ಕೇಳಿ ಹಾಳಮೂಳ ತಿಂತೀವಿ, ತಿಂದಿದ್ದು ವಳಗೆ ತಡಿಯದೇ ಇಲ್ಲ, ಅಂಗೆ ನುಗ್ಗಿ ಬರುತ್ತೆ. ಅದ್ಕೆ ನಾವು ಹಾದಿ ಬೀದೀಲೇ ಹೋಗ್ತೀವಿ' ಅಂದ ಮಾತಿಗೆ ಈ ಮಲ್ಲನು, 'ನುಗ್ಗಿ ಬರುತ್ತೆ ಅಂತ ಅಲ್ಲೇ ಮನೆ ಬಾಗ್ಲಲ್ಲೇ ಹೇತ್ಕಂಡ್‌ಬುಡುರ್ಲ' ಅಂದ.

'ಅಯ್ಯೋ ಅದಂಗ್ ಬಂದ್ರೆ ಅಂಗೇ ಮಾಡದೆ' ಅಂದ ನಿಂಗನ ಮಾತಿಗೆ ಸಿಟ್ಟೆಗೆದ್ದ ಮಲ್ಲನು ಎತ್ತಿಗೆ ಚಾಟಿ ಬೀಸಿ ಎರಡು ಬಾರಿಸಿದನು. ಆ ಏಟಿಗೆ ಎತ್ತುಗಳು ಬಿದ್ದಂಬೀಳ ಓಡಿದವು. ಗಾಡಿಯ ಸಪ್ಪಳಕ್ಕೆ ಊರ ನಾಯಿಗಳು ಗೊಳ್ ಎಂದವು. ಮಲ್ಲ ಅತ್ತ ಮರೆಯಾದನು.

ಇತ್ತ ಬೇಲಿಗೆ ಅಡ್ಡ ನಿಂತು ಮೂತ್ರ ವಿಸರ್ಜಿಸುತ್ತ ನಿಂತ ನಿಂಗನು 'ಅಲ್ಲಾ ಅವಳ್ಯಾವಳೋ ತನ್ನ ಬಿಳಿ ಕುಂಡಿ ಕಾಣುತ್ತೆ ಅಂತ ಅಷ್ಟು ದೂರಕ್ಕೆ ಹೋದ್ರೆ ನಾವ್ಯಾಕೆ ಹೋಗ್ಬೇಕು ಅಂತೀನಿ. ಅಷ್ಟಕ್ಕೂ ನಮ್ಮ ಕರಿ ಕುಂಡಿ ಯಾರ್ ನೋಡ್ತಾರೆ. ಅಂಗೂ ನೋಡ್ಬೇಕು ಅಂತ ಬಯಕೆ ಆದ್ರೆ ಕಷ್ಟಪಟ್ಟು ಎದ್ದು ಬಗ್ಗಿ ನಮ್ಮುಂಡಿ ನಾವೇ ನೋಡ್ಕಬೇಕು' ಅಂತಂದುಕೊಂಡು ಬೇಲಿ ಮರೆಯಿಂದ ಆಚೆಗೆ ಬಂದವನು ಜೇಬು ತಡಕಿದ. ಖಾಲಿಯಾದ ಬೀಡಿಗೆ ಶಿವಣ್ಣನ ಅಂಗಡಿ ನೆನೆದು ಅತ್ತ ಹೋದನು.

ಶಿವಣ್ಣನ ಅಂಗಡಿ ಹತ್ತಿರ ಬಂದಾಗ, ಯಾರೋ ಅವಸರವಸರದಲ್ಲಿ ಸಾಮಾನುಗಳಿಗೆ ಕೈ ಚಾಚುತ್ತಿದ್ದರು. ಬೀಡಿಯ ತೆವಲು ನಿಂಗಣ್ಣನಿಗೆ ಬಾಧಿಸುತ್ತಿತ್ತು. ಮತ್ತೆ ತಾನು ಕೈ ಹಾಕಿದಾಗ ಕೈ ಕೈ ಅಡ್ಡ ಬಂದು ಈ ಬೋಳಿಮಗ ಶಿವ ಏನಾರ ಥಟ್ಟನೆ ಅಂದಾನು ಎಂಬ ದಿಗಿಲು ಬಿತ್ತು. ಅಂಗಡಿಗೆ ಬಂದವನು ಜನ ಖಾಲಿ ಆಗಲಿ ಎಂದು ಅಂದುಕೊಂಡೇ ಅರ್ಧ ಗಂಟೆ ಆಗಿತ್ತು. ಒಬ್ಬರನ್ನೊಬ್ಬರು ನೋಡಿದ್ದರೂ ಇನ್ನೂ ಒಂದಿಬ್ಬರು ಗಿರಾಕಿಗಳು ಬಹಳ ಹೊತ್ತಿನಿಂದ ಸಾಮಾನು ಕೊಳ್ಳುತ್ತಲೇ ಇದ್ದರು. ಸ್ವಲ್ಪ ಹೊತ್ತು ತಡೆದನಾದರೂ ಸುಮ್ಮನಿರಲಾಗದೆ 'ಲೋ ಶಿವ, ಒಂದು ಕಟ್ ಬೀಡಿ ಕೊಡು' ಅಂದನು. ಆ ಮಾತಿಗೆ ಥಟ್ಟನೆ ಶಿವಣ್ಣ 'ಎಲ್ಲಿ ಕೊಡಪ್ಪ ಕಾಸು, ಕೊಡನಾ' ಅಂದನು. ಈ ಶಿವಣ್ಣನ ಮಾತಿಗೆ 'ನಾಳೆ ಕಾಯಿ ತಂದುಕೊಡ್ತಿನಿ. ಒಂದು ಕಟ್ಟು ಬೀಡಿಗೆ ಯಾಕಂಗಾಡ್ತಿಯ?' ಅನ್ನುತ್ತಿದ್ದಂತೆ ಇತ್ತ ಶಿವಣ್ಣ, 'ನಿಂದು ಸಾಲ ಎಷ್ಟೈತೆ ಗೊತ್ತ? ಇಂಗೇ ಬಂದೂ ಬಂದು ಒಂದ್ ಕಟ್ಟು, ಒಂದ್ ಕಟ್ಟು ಅಂತ ತಗಂಡ್ ತಗಂಡು ಕಾಸೇ ಕೊಟ್ಟಿಲ್ಲ. ಕಾಸು ಕೈಲಿದ್ರೆ ಸತ್ಯಣ್ಣನ ಅಂಗಡಿಗೆ ಹೋಗ್ತಿಯ. ಕಾಸ್ ಕೈಲಿಲ್ದಿದ್ದಾಗ ಇಲ್ಲೊಬ್ಬ ಬಿಟ್ಟಿ ಅಷ್ಟೆ ಅಂತ ಬತ್ತೀಯ' ಅನ್ನುತ್ತ ಒಂದು ಕಟ್ಟು ಬೀಡಿ ಕೈಗಿಟ್ಟನು.

ಆ ಮಾತು ಕೇಳಿ, ಇತ್ತ ಬೀಡಿ ತಗಣಕೂ ಆಗ್ದೆ, ಅತ್ತ ಬಿಡಕೂ ಆಗ್ದೆ ಚಟಕ್ಕೆ ಸಿಕ್ಕ ನಿಂಗಣ್ಣನು ಚಡಪಡಿಸಿ ನಿಂತನು. 'ಲೋ ಶಿವ, ನೀನು ಎಷ್ಟೇ ಅಂದ್ರೂ ಆಡಿದ್ರೂ ನೀನು ನಮ್ಮುಡ್ಗ, ಅದೇನಂತಿಯ ಅನ್ನು, ಈಗೇನ್ ಮಾತು ನಿನ್ನತ್ರ... ನನ್ನ ಸಾಲ ಎಷ್ಟೈತೆ ಅದಕ್ಕೂ ಹತ್ ಪಟ್ಟು ಜಾಸ್ತಿನೇ ತಂದು ನಿನ್ನ ಕೈಗಿಟ್ಟಾಗ ನೀನು ನಿನ್ನ ಸಾಲ ಎಲ್ಲ ತೀರುಸ್ಕಂಡು ಉಳಿದ್ ಕಾಸು ತಗ ನಿಂಗಣ್ಣ ಅಂತ ವಾಪಸ್ಸು ಕೊಡ್ತಿಯಲ್ಲ, ಆಗ ನಾನೇ ನಿನಗೆ ಅದುನ್ನ ವಾಪಸ್ಸು ಕೊಟ್ಟು ಇಂಗೆ ಅಂಗಡಿಗೆ ಬಂದು ಸಾಮಾನು ತಗಂಡು ತಗಂಡು ತೀರುಸ್ಕಂತೀನಿ, ನಿನ್ನ ಹತ್ತಿರನೇ ಇರ್ಲಿ ಅಂದಾಗ, ಅಲಲಲಲೇ ಇಂಥಾ ಮನುಷ್ಯನಿಗೆ ನಾನವತ್ತು ಅಂಗೆ ಮಾತಾಡಿದ್ನಲ್ಲ ಅಂತ ನಿನ್ಗೆ ಅನ್ನುಸ್ಬೇಕು. ನಾನೇನಂದೆ ಅದು ಸತ್ಯಕಂಡ್ಲೆ' ಅನ್ನುತ್ತ ಹೆಜ್ಜೆ ಎತ್ತಿ ಮನೆಕಡಿಕೆ ಇಡಬೇಕು ಅಷ್ಟರಲ್ಲಿ, 'ನಿಂತ್ಕೊ ಇಲ್ಲಿ ನಿಂಗಣ್ಣ' ಎಂದು ತಡೆದ ಶಿವಣ್ಣ, 'ನೀನು ಯಾವುದ್ಕೂ ಉಷಾರಾಗಿರು, ಈಗ ಎಲ್ಲ ಬಿಗಿಯಾಗಿದಾರೆ, ರಾತ್ರಿ ಎಲ್ಲ ಕಣ್ಣಿಗೆ ನಿದ್ದೆ ಮಾಡ್ದೆ ಟಾರ್ಚಾಕ್ಕೊಂಡು ಕಣ್ಣಲ್ಲಿ ಕಣ್ಣಿಟ್ಟು ಕಾಯ್ತಾ ಇದ್ದಾರೆ. ಅಕಸ್ಮಾತ್ ಅವರ ಕೈಗೆ ಸಿಕ್ಕಿದರೆ ಕಯ್ಯೋ ಕಾಲೋ ತಗೀತರೆ. ಅದ್ಕೆ ನಾನೇಳ್ತಿರದು. ನೀನು ನಮ್ಮವ್ನು... ಹುಷಾರಾಗಿರು. ಕಾಸು ಇವತ್ತು ಬರುತ್ತೆ, ನಾಳೆ ಹೋಗುತ್ತೆ. ಆದರೆ ಜೀವ ಅಂಗಲ್ಲ' ಎಂದು ಶಿವಣ್ಣ ಎರಡು ಮಾತು ಹೇಳಿದ.

ಆ ಮಾತಿಗೆ ನಿಂಗಣ್ಣನು 'ಲೋ ನೀನು ಇವ್ರುನ್ನ ಅಂಗಡಿ ಮಡ್ಗಿದ್ ಮೇಲೆ ನೋಡ್ತಾ ಇದ್ದೀಯ. ನಾನು ಈ ನನ್ ಮಕ್ಳುನ್ನ ಏಸ್ ವರ್ಷದಿಂದ ಬಲ್ಲೆ' ಎಂದನು. ಮಧ್ಯ ಬಾಯಾಕಿದ ಶಿವಣ್ಣ 'ನೀನು ಏಸು ವರ್ಷದಿಂದಲಾದರೂ ನೋಡಿರು. ಆದ್ರೆ ನಾನು ಈಗ ನಡೀತಾ ಇರದ್ನ ನೋಡಿ ಹೇಳ್ತಾ ಇದ್ದೀನಿ. ಇದರ ಮೇಲೆ ನಿನ್ನಿಷ್ಟ' ಅಂದು ಅದೇನೋ ಅಂಗಡಿಯ ಸಾಮಾನು ತಡಕುತ್ತಿದ್ದ.